10.30 ಎ.ಎಂ.

ಶ್ರೀ ವೈಜನಾಥ ಪಾಟೀಲ್ : ಅಲ್ಲಿ ಯೋಗ್ಯವಾದಂಥ ಸ್ಥಳ ಸಿಕ್ಕರೆ ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿ ವಿದ್ಯಾರ್ಥಿನಿಲಯಗಳಿಗೆ ಕಟ್ಟಡಗಳು

173 - ಶ್ರೀ ಕೆ. ಪ್ರತಾಪ್ ಶೆಟ್ಟಿ (ಕುಂದಾಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವಂತ ಕಟ್ಟಡ ಇಲ್ಲದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ವಿದ್ಯಾರ್ಥಿ, ವಿದ್ಯಾರ್ಥಿನಿಲಯಗಳು ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು).

ಆ) ಇದನ್ನು ಪೂರ್ಣಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 15 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳಿದ್ದು, ಅವುಗಳಲ್ಲಿ ಈ ಕೆಳಕಂಡ 4 ವಿದ್ಯಾರ್ಥಿನಿಲಯಗಳು ಸ್ವಂತ ಕಟ್ಟಡ ಹೊಂದಿರುವುದಿಲ್ಲ.

1)	ಬಾಲಕಿಯರ ವಿದ್ಯಾರ್ಥಿನಿಲಯ ಕುರಾಡಿ, ಉಡುಪಿ ತಾಲ್ಲೂಕು	1
2)	ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಸೂಳ್ಯ	1
3)	ಪರಿಶಿಷ್ಟ ವರ್ಗದ ಬಾಲಕರ ವಿದ್ಯಾರ್ಥಿನಿಲಯ, ಬೆಳ್ತಂಗಡಿ	1
4)	ಬಾಲಕಿಯರ ವಿದ್ಯಾರ್ಥಿನಿಲಯ ಮೂಡಬಿದರೆ, ಕಾರ್ಕಳ ತಾ:	1

ಆ) ಕುಠಾಡಿ, ಮೂಡಬಿದಿರೆ, ಬೆಳ್ತಂಗಡಿಗಳಲ್ಲಿರುವ ವಿದ್ಯಾರ್ಥಿನಿಲಯಗಳ ಕಾಮಗಾರಿಗೆ ಸೂಕ್ತ ನಿವೇಶನ ಇಲ್ಲದ ಪ್ರಯುಕ್ತ ಕಟ್ಟಡದ ಕಾಮಗಾರಿಯನ್ನು ಇಲ್ಲದ ಪ್ರಯುಕ್ತ ಕಟ್ಟಡದ ಕಾಮಗಾರಿಯನ್ನು ತೆಗೆದುಕೊಂಡಿರುವುದಿಲ್ಲ. ಸೂಕ್ತ ನಿವೇಶನ ದೊರೆತ ತಕ್ಷಣ ಕಟ್ಟಡದ ಕಾರ್ಯವನ್ನು ಪ್ರಾರಂಭಿಸಲಾಗುವುದು. ಸೂಳ್ಯದ ವಿದ್ಯಾರ್ಥಿನಿಲಯದ ಕಟ್ಟಡದ ಕಾಮಗಾರಿಗೆ ಸಾಕಷ್ಟು ಹಣ ಲಭ್ಯವಿದ್ದು, ದಕ್ಷಿಣ ಕನ್ನಡ ಜಲ್ಲಾ ಪಂಚಾಯತ್‌ನವರು ಅಂದಾಜು ವೆಚ್ಚ ಮತ್ತು ನಕ್ಷೆಯನ್ನು ತಯಾರಿಸಿದ ತಕ್ಷಣ ಕಟ್ಟಡ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕೊಟ್ಟ ಉತ್ತರದಲ್ಲಿ ನಿವೇಶನ ಸಿಗಲಿಲ್ಲವಾದ ಕಾರಣ ಹಾಸ್ಟೆಲ್ ಕಟ್ಟಡವನ್ನು ಕಟ್ಟಲು ಆಗಲಿಲ್ಲ ಎಂದು ಹೇಳಿದ್ದಾರೆ. ಬಹುಶಃ ತಾಲ್ಲೂಕು ಕೇಂದ್ರಗಳಲ್ಲಿ ಒಂದು ಹಾಸ್ಟೆಲ್‌ಗೆ ನಿವೇಶನ ಸಿಗುವುದಿಲ್ಲವೆಂದಾದರೆ ಆ ಬಗ್ಗೆ ತಾವು ಒಂದು ವಿಚಾರ ಮಾಡಬೇಕಾಗುತ್ತದೆ. ಇವೊತ್ತು 300 ದಿವಸಗಳೂ ತೆರೆದಿರತಕ್ಕಂಥ ಹಾಸ್ಟೆಲ್‌ಗಳಿಗೆ ನಿವೇಶನ ಇಲ್ಲ, ಹಣ ಇಲ್ಲ. ಆದರೆ 30 ದಿವಸಗಳು ಮಾತ್ರ ತೆರೆದಿರತಕ್ಕಂಥ ಸಮಾಜ ಮಂದಿರಗಳನ್ನು ನಾವು ಬೇಕಾಬಿಟ್ಟಿ ಕಟ್ಟುತ್ತಾ ಇದ್ದೇವೆ. ಅದಕ್ಕೆ ಬೇಕಾಗುವ ನಿವೇಶನಗಳು ಸಿಗುತ್ತವೆ ಅದಕ್ಕೆ ದಾಖಲಾತಿಗಳು ಕೂಡ ಬೇಕಾಗಿಲ್ಲ. ಆದ್ದರಿಂದ ಈ ಬಗ್ಗೆ ಯಾಕೆ ತಾವುಗಳು ಮೀನಮೇಷ ಮಾಡುತ್ತಿದ್ದೀರಿ? ಇವೊತ್ತು ಆಶ್ರಮ ಶಾಲೆಗಳು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಇಲಾಖೆಗೆ ಬರುತ್ತದೆ. ಆ ಶಾಲೆಗಳನ್ನು ಮೂರು ವರ್ಷಗಳಿಂದ ಅಲ್ಲಿಯ ಒಂದು ಕ್ವಾರ್ಟರ್ಸ್‌ನಲ್ಲಿ ನಡೆಸುತ್ತಾ ಇದ್ದೇವೆ. ಇದರ ಬಗ್ಗೆ ತಾವುಗಳು ಸರಿಯಾದ

ರಿಪೋರ್ಟ್‌ನ್ನು ತರಿಸಿಲ್ಲವೆ? ಹೀಗಾಗಲು ಕಾರಣವಾದರೂ ಏನು? ಈಗ ಪುನಃ ಆ ಬಗ್ಗೆ ಚರ್ಚೆ ಮಾಡುವ ಸಮಸ್ಯೆಯಾದರೂ ಏನಿದೆ?

ಶ್ರೀ ರಮೇಶ್ ಸಿ. ಜಗಜೀವಣಗಿ : ಮಾನ್ಯ ಅಧ್ಯಕ್ಷರೇ, ಹಾಸ್ಟೆಲ್‌ಗಳಿಗೆ ಎಲ್ಲೆಲ್ಲಿ ನಿವೇಶನಗಳು ಸಿಗುತ್ತವೋ ಅಲ್ಲೆಲ್ಲಾ ಕಟ್ಟಡಗಳನ್ನು ಕಟ್ಟಿಸತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಜೂರಾದ ಎಲ್ಲಾ ಹಾಸ್ಟೆಲ್‌ಗಳನ್ನು ಕಟ್ಟಿಸಿ ನಾಲ್ಕು ಮಾತ್ರ ಬಾಕಿ ಇವೆ. ಈ ಬಗ್ಗೆ ನಿವೇಶನಗಳು ಸಿಕ್ಕಿಲ್ಲವೆಂದು ನಾನು ಹೇಳಿದ್ದೇನೆ. ಅಲ್ಲಿರತಕ್ಕಂಥ ಚೀಫ್ ಎಕ್ಸಿಕ್ಯುಟಿವ್ ಆಫೀಸರ್‌ಗಳಿಗೆ ಸಂಪರ್ಕ ಮಾಡಿದ್ದೇವೆ. ಮಾನ್ಯ ಸದಸ್ಯರು ನಮ್ಮೊಂದಿಗೆ ಸಹಕಾರ ಮಾಡಬೇಕು. ಅವರು ಅಲ್ಲಿ ಒಂದು ನಿವೇಶನವನ್ನು ಎಲ್ಲಿ ಕೊಡಿಸುತ್ತಾರೋ ಅಲ್ಲಿ ನಾಳೆಯೇ ತತ್‌ಕ್ಷಣವೇ ಕಟ್ಟಡವನ್ನು ಕಟ್ಟಿಸಲು ನಾನು ವ್ಯವಸ್ಥೆ ಮಾಡಿಸುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೇ, 1991ರಲ್ಲಿ ಒಂದು ಕಟ್ಟಡವನ್ನು ಇನಾಗ್ಯುರೇಶನ್ ಕೂಡ ಮಾಡಿ ಆಗಿದೆ. ಅದನ್ನು ಪರಿಶಿಷ್ಟ ವರ್ಗ ಮತ್ತು ಪಂಗಡಗಳ ವಿದ್ಯಾರ್ಥಿಗಳಿಗೋಸ್ಕರ ಕಟ್ಟಿರತಕ್ಕಂಥ ಕಟ್ಟಡ ಅದು. ಆದರೆ ಅದು ಯಾರೂ ಕೂಡ ವಾಸಿಸಲು ಆಯೋಗ್ಯವಾದಂಥ ಕಟ್ಟಡವಾಗಿದೆ. ಮಾನ್ಯ ಸಚಿವರು ಮಂಗಳೂರಿಗೆ ಬಂದಾಗ ಅವರ ಗಮನಕ್ಕೆ ಕೂಡ ತಂದಿದ್ದೇನೆ. ಒಂದು ವರ್ಷವಾದರೂ ಕೂಡ ಆ ಕಟ್ಟಡದ ಅವ್ಯವಸ್ಥೆಯು ಸುಧಾರಿಸದೆ ಅತಂತ್ರ ಸ್ಥಿತಿಯಲ್ಲಿದೆ. ಮಂಗಳೂರಿನ ಉರ್ವ ಮಾರ್ಕೆಟ್ಟಿನ ಹತ್ತಿರ ಇರುವ ಈ ವಿದ್ಯಾರ್ಥಿನಿಲಯವನ್ನು ಸುವ್ಯವಸ್ಥೆಗೊಳಿಸಿ ವಾಸಯೋಗ್ಯವನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುವುದರಲ್ಲಿ ಸತ್ಯಾಂಶ ಇದೆ. ನಾನೂ ಕೂಡ ಆ ಹಾಸ್ಟೆಲ್‌ಗೆ ಭೇಟಿ ಕೊಟ್ಟಿದ್ದೇನೆ. ಅದು ಹೊಸ ಹಾಸ್ಟೆಲ್ ಆಗಿದ್ದರೂ ಕೂಡ ಅಲ್ಲಿ ಮಕ್ಕಳು ವಾಸಿಸಲಾರದಂಥ ಸ್ಥಿತಿಯಲ್ಲಿದೆ. ಅದು ಬಹಳ ಹಿಂದೆ ಕಟ್ಟಿರತಕ್ಕಂಥ ಕಟ್ಟಡ. ಅದರ ಬಗ್ಗೆ ಸಂಪೂರ್ಣವಾದ ವಿಚಾರಣೆ ಮಾಡಿ ಒಂದು ವರದಿಯನ್ನು ಸಲ್ಲಿಸಲು ಹೇಳಿದ್ದೇನೆ. ಅದನ್ನು ಸುವ್ಯವಸ್ಥೆಗೊಳಿಸಲು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ಹಾಸ್ಟೆಲ್ ಕಟ್ಟಡಕ್ಕೆ ನಿವೇಶನ ಇಲ್ಲವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ ನಿವೇಶನವನ್ನು ಹುಡುಕುವುದು ಯಾರು? ನೀವು ಯಾರಿಗೆ ಬರೆಯುತ್ತೀರಿ? ನೀವು ಕಂದಾಯ ಇಲಾಖೆಗೆ ಬರೆಯುತ್ತೀರಿ. ಅವರು 2-3 ವರ್ಷ ಬಿಟ್ಟು ನಿವೇಶನ ಕೊಡಬಹುದು. ನೀವು ವಿಶೇಷವಾಗಿ ಹಾಸ್ಟೆಲ್‌ಗಳಿಗೆ ನಿವೇಶನವನ್ನು ಹುಡುಕತಕ್ಕಂಥ ಪ್ರಯತ್ನಗಳನ್ನೇನಾದರೂ ಮಾಡುತ್ತಾ ಇದ್ದೀರಾ? ಆ ಕುರಿತು ತಮ್ಮ ವ್ಯವಸ್ಥೆಗಳು ಹೇಗೆ? ಈಗ ಸಿಂಗಲ್ ವಿಂಡೊ ಏಜನ್ಸಿ ವ್ಯವಸ್ಥೆ ಇದೆ. ಅದರ ಮುಖಾಂತರ ಎಲ್ಲಾ ಅಧಿಕಾರಿಗಳು ಸೇರಿ ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡಲು ಇಂತಿಷ್ಟು ಸಮಯದಲ್ಲಿ ನೀವು ಹುಡುಕಿಕೊಡಬೇಕು, ಜನಪ್ರತಿನಿಧಿಗಳನ್ನು ಆ ಕುರಿತು ಇನ್‌ವಾಲ್ವ್ ಮಾಡಿಕೊಂಡು ಮಾಡಿ ಎಂಬ ವ್ಯವಸ್ಥೆಯನ್ನೇನಾದರೂ ಮಾಡಿದ್ದೀರೋ?

ಅಧ್ಯಕ್ಷರು : ಮಾನ್ಯ ಸದಸ್ಯರು ಒಂದು ವರ್ಷದಲ್ಲಿ ದ.ಕ. ಜಿಲ್ಲೆಗೆ ಎಷ್ಟು ಸಾರಿ ಹೋಗಿದ್ದೀರಿ? ನೀವುಗಳಿಲ್ಲರೂ ನಿಮ್ಮ ಕ್ಷೇತ್ರದ ಕಡೆಗೆ ಇರುತ್ತೀರಿ. ರಾಜ್ಯದ ಕಡೆಗಳಿಗೆಲ್ಲಾ ನೋಡುವುದಿಲ್ಲ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೇ, ದ.ಕ. ಜಿಲ್ಲೆಗೆ ನಾನು ಒಂದು ವರ್ಷದಲ್ಲಿ ಎರಡು ಸಲ ಹೋಗಿದ್ದೇನೆ. ಅಲ್ಲಿನ ವ್ಯವಸ್ಥೆಗಳನ್ನು ನೋಡಿದ್ದೇನೆ.

ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಏನು ಹೇಳುತ್ತಿದ್ದಾರೆ ಆ ಬಗ್ಗೆ ಅವರೂ ಕೂಡ ಸಹಕಾರ ಮಾಡಬೇಕೆಂದು ಮನವಿ ಮಾಡಿಕೊಂಡಿದ್ದೇನೆ. ಬೇಗ ನಿವೇಶನ ದೊರಕಿಸಿಕೊಡಲು ಯತ್ನಿಸಲಿ. ನಾಳೆಯೇ ನಾನು ಅಲ್ಲಿನ ಚೀಫ್ ಎಕ್ಸಿಕ್ಯುಟಿವ್ ಆಫೀಸರ್‌ಗೆ ಸಂಪರ್ಕ ಮಾಡಿ ಕೂಡಲೇ ನಿವೇಶನ ಒದಗಿಸಿಕೊಳ್ಳುವ ಕೆಲಸವನ್ನು ಮಾಡುತ್ತೇನೆ.

ಅಧ್ಯಕ್ಷರು : ಸ್ಥಳೀಯವಾಗಿ ಶಾಸಕರುಗಳಿಗೆ ವರ್ಚಸ್ಸು ಇರುತ್ತದೆ. ಹಾಗಾಗಿ ಅಲ್ಲಿ ಅವರು ತಮ್ಮ ಪ್ರಭಾವವನ್ನು ಬೀರಿದರೆ ಬೇಗನೆ ಅಥವಾ ಒಳ್ಳೆಯ ನಿವೇಶನ ಸಿಗುತ್ತದೆಯಾದ ಕಾರಣ ಸಚಿವರು ತಮ್ಮ ಅಭಿಪ್ರಾಯವನ್ನು ಹೇಳಿ ಮನವಿ ಮಾಡಿಕೊಂಡಿದ್ದಾರೆ. ಸರಕಾರವೇ ತನ್ನ ಅಧಿಕಾರಿಗಳ ಮುಖಾಂತರ ಆ ಕೆಲಸವನ್ನು ಹೇಳಿ ಮನವಿ ಮಾಡಿಕೊಂಡು ಮಾಡತಕ್ಕಂಥಾದ್ದು ಕೂಡ ಮುಖ್ಯ ಎಂಬ ಮಾತನ್ನು ಅವರು ಹೇಳಿದ್ದಾರೆ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ಒಂದು ವಿಚಾರ ತರಬಯಸುವುದೇನೆಂದರೆ, ಆ ಹಾಸ್ಟೆಲ್‌ಗಳನ್ನು ಕಟ್ಟುತ್ತಾ ಇರುವುದಕ್ಕೆ ಸಮಯವನ್ನು ಕೂಡ ನಿಗದಿಪಡಿಸಬೇಕು. ಈಗ ಹಂತ ಹಂತವಾಗಿ ಹಾಸ್ಟೆಲ್‌ಗಳು ಪ್ರಾರಂಭವಾಗುತ್ತಾ ಇವೆ. ಅವುಗಳನ್ನು ಮುಗಿಸುವಾಗ ಕನಿಷ್ಟ ಪಕ್ಷ 5-6 ವರ್ಷಗಳು ಆಗುತ್ತವೆ. ಹಾಗಾಗಿ ಮೊದಲು ಮಾಡಿರತಕ್ಕಂಥ ಎಸ್ಟಿಮೇಟ್ ವಗೈರೆ ಜಾಸ್ತಿಯಾಗುತ್ತದೆ. ಆಗ ಮತ್ತು ಮರುಪರಿಶೀಲನೆ ಇತ್ಯಾದಿಗಳಿಗೆಂದು ಮೂರು ವರ್ಷಗಳನ್ನು ಕಳೆಯುತ್ತಾರೆ. ಆದರಿಂದ ಈ ಬಗ್ಗೆ ಒಂದು ನಿರ್ದಿಷ್ಟ ಕ್ರಮವನ್ನು ತೆಗೆದುಕೊಳ್ಳಬೇಕು. ಇದು ದಲಿತರಿಗಾಗಿ ಮಾಡುವ ಕೆಲಸವಾಗಿದೆ.

ಅಧ್ಯಕ್ಷರು : ಬೇರೆ ಕಡೆಗೆ ಏಕೆ? ನಮ್ಮ ಶಾಸಕರ ಭವನದ ಸ್ಥಿತಿಗತಿಗಳನ್ನು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಬಿ.ಬಿ. ಶಿವಪ್ಪ : ಹೀಗೆ ವಿಳಂಬವನ್ನು ಮಾಡುವುದರಿಂದ ಯಾವುದೇ ಉಪಯೋಗ ಆಗುತ್ತಾ ಇಲ್ಲ, ಯಾವ ಉದ್ದೇಶಕ್ಕಾಗಿ ಈ ಕೆಲಸಗಳನ್ನು ಕೈಗೊಂಡಿದ್ದೀರಿ ಅಂಥವರಿಗೆ ವಸತಿ ಸಿಗುತ್ತಾ ಇಲ್ಲ, ಕಟ್ಟಡಗಳ ಕೆಲಸವು ಪೂರ್ತಿಯಾಗುತ್ತಾ ಇಲ್ಲ, ಒಂದು ವರ್ಷದಲ್ಲಿ ಮಾಡತಕ್ಕಂಥ ಕೆಲಸಗಳಿಗೆ 8-10 ವರ್ಷಗಳಷ್ಟು ತೆಗೆದುಕೊಂಡರೆ ಅದಕ್ಕೆ ಹೆಚ್ಚುವರಿ ಖರ್ಚು ಎಷ್ಟು ಬರುತ್ತದೆ ಎಂಬುದನ್ನು ನೋಡಬೇಕು. ಆದ್ದರಿಂದ ಹಾಸ್ಟೆಲ್ ಕಟ್ಟಡಗಳನ್ನು ಕಟ್ಟುವ ವಿಚಾರದಲ್ಲಿ ಸಮಯ ನಿಗದಿಪಡಿಸಬೇಕು.

ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ಪ್ರದೇಶದಲ್ಲಿ ಶೌಚಾಲಯ

121 - ಶ್ರೀ ಅಶೋಕ್ ಎಸ್. ಕಾಟ್ವೆ (ಹುಬ್ಬಳ್ಳಿ ನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ಪ್ರದೇಶದಲ್ಲಿ ಸಾರ್ವಜನಿಕ ಶೌಚಾಲಯ ಹಾಗೂ ಮೂತ್ರಾಲಯಗಳೆಷ್ಟು?

ಆ) 1995-96ರಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಸಾರ್ವಜನಿಕ ಶೌಚಾಲಯ 223 ಬ್ಲಾಕ್, 1,494 ಸೀಟುಗಳು. ಸಾರ್ವಜನಿಕ ಮೂತ್ರಾಲಯ 98 ಬ್ಲಾಕ್ 358 ಸೀಟುಗಳು.

ಆ) ಜನವರಿ 96ರ ವರೆಗೆ ರೂ. 1,93,052.